7. ಜನರಲ್ಲಿ ಈ ರೋಗದ ತಡೆಗಟ್ಟುವ ಬಗ್ಗೆ ತಿಳುವಳಿಕೆ ಮೂಡಿಸಲು ಭಿತ್ತಿಪತ್ರಗಳನ್ನು ಕಿರು ಹೊತ್ತಿಗೆಗಳನ್ನು ಮುದ್ರಿಸಿ ಹಂಚಲಾಗಿರುವುದೇ ಅಲ್ಲದೆ, ಹಲವೆಡೆ ಚಲನಚಿತ್ರ ಪ್ರದರ್ಶನವನ್ನು ಸಹ ಕೈಗೊಳ್ಳಲಾಗಿದೆ.

ಬಸವಣ್ಣನವರ ಜನ್ಮ ಸ್ಥಳದಲ್ಲಿ ಬಸವ ಸ್ಮಾರಕ ನಿರ್ಮಾಣ

1516 (2082) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ವಿಶ್ವಗುರು ಬಸವಣ್ಣನವರ ಜನಸ್ಥಳದಲ್ಲಿ ಬಸವ ಸ್ಮಾರಕ ನಿರ್ಮಿಸಲಾಗಿದೆಯೇ;

ಆ. ಬಸವ ಸ್ಮಾರಕ ನಿರ್ಮಾಣಕ್ಕೆ ಸರ್ಕಾರವು ಮಂಜೂರು ಮಾಡಿದ ಹಣ ಎಷ್ಟು;

ಇ. ಬಸವ ಸ್ಮಾರಕವನ್ನು ನಿರ್ಮಿಸದೇ ಇದ್ದಲ್ಲಿ, ಸರ್ಕಾರ ಯಾವ ಕಾಲಮಿತಿ ನಿರ್ಧರಿಸಿ ಸ್ಮಾರಕ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗುವುದು; ನಿರ್ದಿಷ್ಟ ಕಾಲಮಿತಿ ತಿಳಿಸುವುದು;

ಈ. "ಬಸವ ..... ಇಂಗಳೇಶ್ವರವನ್ನು ಅಭಿವೃದ್ಧಿ ಪಡಿಸುವ ಸಂಬಂಧ ಸರ್ಕಾರ ಅನುದಾನ ವನ್ನೇನಾದರೂ ಮಂಜೂರು ಮಾಡಿದೆಯೆ;

ಉ. ಹಾಗಿದ್ದರೆ, ಮಂಜೂರಾಗಿರುವ ಮೊತ್ತ ಎಷ್ಟು; ಆ ಹಣವನ್ನು ಬಳಸಿಕೊಳ್ಳಲಾಗಿದೆಯೆ;

ಊ. ಬಳಸಿಕೊಳ್ಳದೇ ಇದ್ದ ಪಕ್ಷದಲ್ಲಿ ಕಾರಣಗಳೇನು; ಆ ಕೆಲಸವನ್ನು ಯಾವ ವೇಳೆಗೆ ಪೂರ್ತಿಗೊಳಿಸಲಾಗುವುದು; ಕಾಲಮಿತಿ ತಿಳಿಸುವುದು?

ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು)

ಅ. ಇಲ್ಲ

ಆ. ರೂ. 18.00 ಲಕ್ಷ

ಇ. ಜಿಲ್ಲಾ ಜಿಲ್ಲಾಧಿಕಾರಿಗಳು ಸ್ಮಾರಕಗಳ ನಿರ್ಮಾಣ ಸಮಿತಿಯ ಅಧ್ಯಕ್ಷರಾಗಿದ್ದು ಕಾಲಾವಧಿಯನ್ನು ಗೊತ್ತುಪಡಿಸಿಕೊಂಡು ನಿರ್ಮಾಣ ಕಾರ್ಯವನ್ನು ಮುಗಿಸುವಂತೆ ಸೂಕ್ತ ಸೂಚನೆ ನೀಡಲಾಗುವುದು.

ಈ. ಇಲ್ಲ.

ಉ. ಉದ್ಭವಿಸುವುದಿಲ್ಲ.

ಊ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಅರೆಕಾಲಿಕ ಉಪನ್ಯಾಸಕರ ವೇತನ

1517 (1517) ಶ್ರೀ ಪುಟ್ಟರಂಗನಾಥ ಎಸ್.ಹೆಚ್ (ಬೇಲೂರು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಅರೆಕಾಲಿಕ ಉಪನ್ಯಾಸಕರ ವೇತನ ಹೆಚ್ಚಳದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಡಾ. ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ. ಅರೆಕಾಲಿಕ ಉಪನ್ಯಾಸಕರುಗಳಿಗೆ ವಹಿಸಿಕೊಡುವ ಕಾರ್ಯಭಾರ ಗರಿಷ್ಠ 08 ಗಂಟೆಗಳಿಗೆ ಮೀರದಂತೆ ಬೋಧಿಸುವ ಅರೆಕಾಲಿಕ ಉಪನ್ಯಾಸಕರಿಗೆ ಮಾಹೆಯಾನ ರೂ. 1,200 ಭತ್ಯೆ ನೀಡಲಾಗುತ್ತಿದೆ. ವೇತನ ಹೆಚ್ಚಿಸುವಂತೆ ಕೆಲವೊಂದು ಅರೆಕಾಲಿಕ ಉಪನ್ಯಾಸಕರು ಮನವಿ ಮಾಡಿರುತ್ತಾರೆ. ಇವರ ಮನವಿ ಪರಿಶೀಲನೆಯಲ್ಲಿದೆ. ಆದರೆ ಪ್ರಸ್ತುತ ವೇತನ ಹೆಚ್ಚಳದ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.